ದಿನಾಂಕಃ 22.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **1 (ಎ)** ಮತ್ತು **2** ಮತ್ತು **4** ನೇ ಪ್ರತಿವಾದಿ ಪರ ಶ್ರೀ ಆರ್ ಕೆ ಟಿ ವಕೀಲರಿಂದಃ</u>

ನೀವು Relegere Filvest Limited ಕಂಪನಿಯಿಂದ ಸಾಲವನ್ನು ಪ್ರತಿವಾದಿ 4 ರವರ ಜೊತೆ Joint Development agreement (ಜೆ ಡಿ ಎ ) ಬರೆದುಕೊಡುವ ಪೂರ್ವದಲ್ಲಿ ಪಡೆದುಕೊಂಡಿದ್ದೀರಾ ಎಂದರೆ ಹೌದು . ಜೆ ಡಿ ಎ ಬರೆದುಕೊಡುವ ಕಾಲಕ್ಕೆ ಔಟ್ ಸಾಂಡಿಂಗ್ / ಸಾಲದ ಬಾಕಿ ಹಣ ಎಷ್ಟಿತ್ತು ಎಂದರೆ ಸುಮಾರು ಆರೂವರೆ ಕೋಟಿ ಇತ್ತು . ಸಾಲವನ್ನು ತೀರಿಸುವ ಪೂರ್ಣ ಜವಾಬ್ದಾರಿ ನಿಮ್ಮದಾಗಿತ್ತು ಎಂದರೆ ಸರಿ . 4 ನೇ ಪ್ರತಿವಾದಿ ನಾನು ರಿಲಿಗೇರ್ ಕಂಪನಿಯಲ್ಲಿ ಮಾಡಿರುವ ಸಾಲ ತೀರಿಸುವ ಸಂಬಂಧ ಮೂರು ಕೋಟಿಗಳಿಗಿಂತ ಹೆಚ್ಚಿನ ಹಣವನ್ನು ರಿಲಿಗೇರ್ ಕಂಪನಿಗೆ ಸಂದಾಯ ಮಾಡಿದ್ದಾರೆ ಎಂದರೆ ತಪ್ಪು . ನಿಮ್ಮ ಮತ್ತು 4 ನೇ ಪ್ರತಿವಾದಿ ನಡುವೆ Arbitration ಪ್ರಕರಣ ನಡೆದಿತ್ತು ಎಂದರೆ ಸರಿ ಅದರಲ್ಲಿ ನೀವು ಸಾಕ್ಷಿ ಹೇಳಿದ್ದೀರಿ ಎಂದರೆ ಸರಿ . ನಿಮ್ಮ ಸಾಕ್ಷಿ ಹೇಳಿಕೆ ಈಗಾಗಲೇ ನಿಡಿ 1 ಎಂದು ಗುರುತಿಸಲಾಗಿದೆ ಅದರಲ್ಲಿ 4 ನೇ ಪ್ರತಿವಾದಿ ನಿಮ್ಮ ಖಾತೆಗೆ 3 ಕೋಟಿ 13 ಲಕ್ಷ ಹಣ ಸಂದಾಯ ಮಾಡಿದ್ದಾರೆ ಎಂದು ಒಪ್ಪಿ ಕೊಂಡಿದ್ದೀರಿ ಎಂದರೆ ಸರಿಯಿದೆ . ಹಾಗಾದರೆ ನಿಡಿ 1 ರಲ್ಲಿ ನಮೂದಿಸಿರುವುದು ತಪ್ಪೆ ಎಂದರೆ ಟೈಪಿಂಗ್ ಮಿಸ್ ಟೇಕ್ ಆಗಿದೆ . ಆ ಟೈಪಿಂಗ್ ಮಿಸ್ ಟೇಕ್ ನ್ನು ಸರಿಪಡಿಸಲು Arbitrator ಮುಂದೆ ನೀವೇನಾದರೂ ಅರ್ಜಿಸಲ್ಲಿಸಿದ್ದೀರಾ

ಎಂದರೆ ನಾನು ಗಮನಿಸಿರಲಿಲ್ಲ , ಅರ್ಜಿಸಲ್ಲಿಸಿಲ್ಲ.

ನೀವು ಅಲ್ಲಿ ಒಪ್ಪಿ ಕೊಂಡಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಖಾತೆಗೆ 4 ನೇ ಪ್ರತಿವಾದಿ ಸಂದಾಯ ಮಾಡಿದ ಹಣವನ್ನು ಅವರಿಗೆ ವಾಪಸ್ಸು ನೀಡಿದ್ದೀರಾ ಎಂದರೆ 1 ಕೋಟಿ 90 ಲಕ್ಷ 4 ನೇ ಪ್ರತಿವಾದಿ ಕಟ್ಟಿದ್ದರು ಅದನ್ನು ಇಲ್ಲಿಯವರೆಗೂ ನಾನು ವಾಪಸ್ಸು ಮಾಡಲಿಲ್ಲ. ನೀವು 4 ನೇ ಪ್ರತಿವಾದಿ ಕಟ್ಟಿರುವುದು 1 ಕೋಟಿ 90 ಲಕ್ಷ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಜೆ ಡಿ ಎ ಮಾಡಿಕೊಳ್ಳುವಾಗ ಸೆಕ್ಯೂರಿಟಿ ಡಿಪಾಸಿಟ್ ನ್ನು 4 ನೇ ಪ್ರತಿವಾದಿ ನೀಡಿದ್ದರು ಆ ಹಣವನ್ನು ವಾಪಸ್ಸು ನೀಡಿದ್ದೀರಾ ಎಂದರೆ ಇಲ್ಲ . ದಿ ಃ 03.12.2021 ನೀವು ಸಾಕ್ಷಿ ಹೇಳಿದ ಸಂದರ್ಭದಲ್ಲಿ ನೀವು ರಿಲಿಗೇರ್ ಕಂಪನಿಯಿಂದ ಪಡೆದುಕೊಂಡಿದ ಸಾಲದ ಹಣವನ್ನು ಸಂಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಅಂತ ಹೇಳಿದ್ದೀರಿ ಆ ದಾಖಲೆಯನ್ನುಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿಲ್ಲ. ಹಾಜರುಪಡಿಸುತ್ತೀರಾ ಎಂದರೆ ಹೌದು ಹಾಜರುಪಡಿಸುತ್ತೇನೆ . ನಿಪಿ 76 ಐಡಿಯಲ್ ಡಿಸ್ಟಿ ಬ್ಯೂಟರ್ಸ್ ಗೆ ಸಂಬಂಧ ಪಟ್ಟಿದ್ದು ಎಂದರೆ ಸರಿ . ಐಡಿಯಲ್ ಡಿಸ್ಟಿ ಬ್ಯೂಟರ್ಸ್ ಏನು ಎಂದರೆ ಅದು ಪಾರ್ಟನರ್ ಶಿಪ್ ಕಂಪನಿ ಅದರ ನೋಂದಣಿ ಪತ್ರವನ್ನು ಗುರುತಿಸಿದ್ದೇನೆ . ಅದಕ್ಕೆ ನಾನು ನನ್ನ ಹೆಂಡತಿ ಇಬ್ಬರು ಪಾರ್ಟನರ್ಸ್ ಆಗಿರುತ್ತೇವೆ . ಪಾರ್ಟನರ್ ಶಿಪ್ ಫರ್ಮ್ ನ್ನು ಯಾವಾಗ

ಕಾನ್ ಸಿಟಟ್ಯೂಟ್ ಮಾಡಿದ್ದೆವು ಎಂದು ದಾಖಲೆ ನೋಡಿ ಹೇಳಬಲ್ಲೆ ಹಾಗೆಯೇ ಹೇಳಲು ನನಗೆ ನೆನಪಿಲ್ಲ. ಪಾರ್ಟನರ್ ಶಿಪ್ ಫರ್ಮ್ ಸುಮಾರು 10 – 12 ವರ್ಷಗಳ ಹಿಂದೆ constitute ಮಾಡಿರುವೆವು . ಆ ಪಾರ್ಟನರ್ ಶಿಪ್ ಫರ್ಮ್ ಈಗ ಅಸ್ತಿತ್ವದಲ್ಲಿ ಇಲ್ಲ . ಅದು 2018 ನೇ ಇಸವಿಯಲ್ಲಿ ಮುಕ್ತಾಯಗೊಂಡಿತು . ನೀವು ನೀಡಿರುವ ನಿಪಿ 76 ದಾಖಲೆ ಕೇವಲ 2015 – 16 ನೇ ಇಸವಿಗೆ ಸಂಬಂಧಿಸಿದ್ದು ಎಂದರೆ ಸರಿ . ಐಡಿಯಲ್ ಪಾರ್ಟನರ್ ಶಿಪ್ ಫರ್ಮ್ ಪ್ರಾರಂಭವಾದಾಗಿನಿಂದ ಮುಕ್ತಾಯವಾಗುವವರೆಗೆ ಆಗಿರುವ ವ್ಯವಹಾರಗಳ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ . ಐಡಿಯಲ್ ಡಿಸ್ಟಿಬ್ಯೂಟರ್ಸ್ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿ .

ನಿಪಿ 76 ದಾಖಲೆಯ ವ್ಯವಹಾರಗಳು ಪ್ರತಿವಾದಿಗಳಿಗಾಗಲೀ , ದಾವಾ ಸ್ವತ್ತಿಗೆ ಅಗಲೀ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ 76 ರಲ್ಲಿರುವ 14 transactions ಗಳಲ್ಲಿ ಯಾವುದಾದರೂ ಒಂದು ಪ್ರತಿವಾದಿಗಳಿಗೆ ಸಂಬಂಧಿಸಿದ್ದು ಎಂದು ತೋರಿಸಲು ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ . ಸಾಕ್ಷಿ ಮುಂದುವರೆದು ನನಗೆ ಸೇರಬೇಕಾದ 4 ಪ್ಲಾಟ್ ಗಳನ್ನು ಅವರು ಮಾರಿ ತೆಗೆದುಕೊಂಡಿದ್ದರು . ಆದ್ದರಿಂದ ನನಗೆ ದುಡ್ಡು ಕೊಟ್ಟಿರಲಿಲ್ಲ ಆ ಸಮಯದಲ್ಲಿ ನಾನು ಸಾಲ ಮಾಡಬೇಕಾಗಿ ಬಂತು ಆ ಸಂಬಂಧ ದುಡ್ಡು ಕೊಟ್ಟಿರುವ ಬಗ್ಗೆ ತೋರಿಸಲು ನಿಪಿ 76 ನ್ನು ಹಾಜರು ಪಡಿಸಿರುತ್ತೇನೆ .

ನಿಮಗೆ ಸೇರಬೇಕಾದ 4 ಪ್ಲಾಟ್ ಗಳನ್ನು ಅವರು ಮಾರಿ ತೆಗೆದುಕೊಂಡಿದ್ದರು . ಆದ್ದರಿಂದ ನನಗೆ ದುಡ್ಡು ಕೊಟ್ಟಿರಲಿಲ್ಲ ಆ ಸಮಯದಲ್ಲಿ ನಾನು ಸಾಲ ಮಾಡಬೇಕಾಗಿ ಬಂತು ಆ ಸಂಬಂಧ ದುಡ್ಡು ಕೊಟ್ಟಿರುವ ಬಗ್ಗೆ ತೋರಿಸಲು ನಿಪಿ 76 ನ್ನು ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ .

ನಿಪಿ 76 ನ್ನು ಯಾರು ಯಾವ ದಿನ ತಯಾರು ಮಾಡಿದ್ದರು ಎಂದರೆ ನಮ್ಮ ಆಡಿಟರ್ ಅವರ ಲೆಜ್ಜರ್ ನಲ್ಲಿ ಇತ್ತು ಅದನ್ನು ತಂದು ಹಾಜರುಪಡಿಸಿರುತ್ತೇನೆ . ಅದನ್ನು ಯಾವ ದಿನ ನೀಡಿದ್ದರು ಎಂದು ನಮೂದಾಗಿಲ್ಲ ಎಂದರೆ ಸರಿ . ನಿಪಿ 76 ರಲ್ಲಿ 14 transactions ಗ ಳನ್ನು ಯಾವ ದಾಖಲೆಯ ಆಧಾರದ ಮೇಲೆ ಬರೆದಿದ್ದಾರೆ ಎಂದರೆ ನಾನು ಸಾಲಗಾರರಿಂದ ಸಾಲ ಪಡೆದುಕೊಂಡಿರುವುದಕ್ಕೆ ಬ್ಯಾಂಕ್ ಪಾಸ್ ಪುಸ್ತಕ ಮತ್ತು ಅವರಿಗೆ ಬಡ್ಡಿ ತೀರಿಸಿರುವುದಕ್ಕೆ ದಾಖಲೆಯನ್ನು ಪರಿಶೀಲಿಸಿ ಬರೆದಿರುತ್ತಾರೆ . ಆ ರೀತಿ ಪರಿಶೀಲಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸರಿ . ನಿಪಿ 76 ರ ಮೊದಲನೇ transactions ನಲ್ಲಿ ಕ್ಯಾಪಿಟಲ್ ಪಾಮ್ ಅಂತ ಇದೆ ಎಂದರೆ ಸರಿ. ಅವರಿಂದ ಸಾಲ ಯಾವ ದಿನಾಂಕದಂದು ಪಡೆದುಕೊಂಡಿದ್ದೀರಿ ಎಂದರೆ ದಾಖಲೆಯನ್ನು ನೋಡಿ ಹೇಳುತ್ತೇನೆ . ಯಾವ ರೀತಿ ಸಾಲ ಎಂದರೆ ಬಿಸಿನೆಸ್ ಲೋನ್ ಅಂತ ತೆಗೆದುಕೊಂಡಿದ್ದೆ . ಯಾವ ಬಿಸಿನೆಸ್ ಗೆ ಸಂಬಂದಿಸಿದ ಲೋನ್ ಎಂದರೆ ನಾನು ನಡೆಸುತ್ತಿದ್ದ ಬಿಸಿನೆಸ್ ಗೆ ಸಂಬಂದಿಸಿದ್ದು . ಆ ಸಾಲ ತೀರುವಳಿ ಆಗಿದೆಯೇ ಎಂದರೆ

ಹೌದು . ಯಾವ ವರ್ಷ , ದಿನಾಂಕದಂದು ತೀರುವಳಿ ಆಗಿತ್ತು ಎಂದರೆ ದಾಖಲೆಯನ್ನು ನೋಡಿ ಹೇಳಬೇಕು ಅಂತ ಹೇಳುತ್ತಾರೆ . ಎಷ್ಟು ಹಣ ಸಾಲ ಪಡೆದುಕೊಂಡಿದ್ದೀರಿ ಎಂದರೆ ನಿರ್ದಿಷ್ಟವಾಗಿ ನನಗೆ ನೆನಪಿಲ್ಲ . ಸುಮಾರು 20 ಲಕ್ಷ ಸಾಲ ಪಡೆದುಕೊಂಡಿರಬಹುದು . ಸಾಲವನ್ನು ತೀರುವಳಿ ಮಾಡಿರುವ ಬಗ್ಗೆ ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ . ಉಳಿದಂತಹ 13 transactions ಸಂಬಂದಿಸಿದ ಸಾಲವನ್ನು ಯಾವ ದಿನಾಂಕ , ವರ್ಷ ದಲ್ಲಿ ಪಡೆದುಕೊಂಡಿದ್ದೀರಿ ಎಂದರೆ ದಿ ಃ 01.04.2015 ರಿಂದ 31.03.2015 ರ ಒಳಗಡೆ ಪಡೆದುಕೊಂಡಿದ್ದೆನು . ಎಲ್ಲ ಸಾಲಗಳನ್ನು ತೀರುವಳಿ ಮಾಡಿದ್ದೆನು . ಸದರಿ ಎಲ್ಲಾ ಸಾಲಗಳು ತೀರುವಳಿ ಆಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ . ಅವಶ್ಯಕತೆ ಬಿದ್ದರೆ ಹಾಜರುಪಡಿಸುತ್ತೇನೆ . ನಿಪಿ 76 ನ್ನು ನೀವು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ.

ನಿಪಿ 77 ಐಡಿಯಲ್ ಡಿಸ್ಟಿ ಬ್ಯೂಟರ್ಸ್ ಬಿಸಿನೆಸ್ ಲೋನ್ ಗೆ ಸಂಬಂಧಿಸಿದ ದಾಖಲೆ ಎಂದರೆ ಹೌದು . ಸದರಿ ಬಿಸಿನೆಸ್ ಲೋನ್ ಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಇಲ್ಲ . ಸಾಕ್ಷಿ ಮುಂದುವರೆದು ಇವರು ನನ್ನ 4 ಪ್ಲಾಟ್ ನ್ನು ಮಾರಿ ಹಣ ಕೊಡದ ಕಾರಣ ನಾನು ಸಾಲ ಮಾಡಬೇಕಾಗಿ ಬಂದಿತ್ತು . ನಿಮ್ಮ 4 ಪ್ಲಾಟ್ ನ್ನು ಮಾರಿ ಇವರು ಹಣ ಕೊಡದಿದ್ದ ಕಾರಣ ನಾನು ಸಾಲ ಮಾಡಬೇಕಾಗಿ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ 77 ರ ಜೊತೆಯಲ್ಲಿ ಒಂದು ಲೆಚ್ಚರ್

ಅಕೌಂಟ್ ನ್ನು ನೀಡಿದ್ದೀರಿ ಅದರಲ್ಲಿ ಬರೆದಿರುವ transactions ಗೆ ಸಂಬಂಧಿಸಿದ ಯಾವುದಾದರೂ ಬ್ಯಾಂಕ್ ಅಕೌಂಟ್ ಸ್ಟೇಟ್‌ಮೆಂಟ್‌ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ . ಹಾಜರುಪಡಿಸುತ್ತೇನೆ. 2016 ರ ನಂತರ ಮೇಲೆ ಹೇಳಿದ transactions ಗೆ ಸಂಬಂಧಿಸಿದಂತೆ ಏನು ಬೆಳವಣಿಗೆ ಆಗಿದೆ ಆ ಸಂಬಂಧ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆಹಾಜರುಪಡಿಸಿಲ್ಲ ಎಂದರೆ ಸರಿ .

ನಿಪಿ 78 ಐಡಿಯಲ್ ಡಿಸ್ಟಿಬ್ಯೂಟರ್ಸ್ ಬಿಸಿನೆಸ್ ಲೋನ್ ಗೆ ಸಂಬಂಧಿಸಿದ ದಾಖಲೆ ಎಂದರೆ ಹೌದು . ಸದರಿ ಬಿಸಿನೆಸ್ ಲೋನ್ ಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಇಲ್ಲ .

ನಿಪಿ 79 ವಾಹನದ ಲೋನ್ ಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ . ಮೂರು ವಾಹನಗಳಿಗೆ ಸಂಬಂಧಿಸಿದ ಲೋನ್ ಅಕೌಂಟ್ ದಾಖಲೆ ಎಂದರೆ ಸರಿ . ಯಾವ ಯಾವ ವಾಹನಗಳು , ವಾಹನಗಳ ಸಂಖ್ಯೆ ಎಷ್ಟು ಎಂದರೆ ಮೂರು ಮಿನಿ ಟ್ರಕ್ ಗಳು ಅವುಗಳ ಸಂಖ್ಯೆ ನನಗೆ ನೆನಪಿಲ್ಲ. ಮಿನಿ ಟ್ರಕ್ ಗಳನ್ನು ಕಂಪನಿ ಹೆಸರಲ್ಲಿ ಖರೀದಿಸಿದ್ದೆವು . ಯಾವ ವರ್ಷ , ದಿನಾಂಕ ನನಗೆ ನೆನಪಿಲ್ಲ. ವಾಹನಗಳನ್ನು ಯಾವ ದಿನಾಂಕ , ಇಸವಿ ಖರೀದಿಸಿದ್ದೆನು ಎಂದು ನನಗೆ ನೆನಪಿಲ್ಲ. ವಾಹನ ಲೋನ್ ಗೆ ಸಂಬಂದಿಸಿದ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ . ನೀವು ಲೋನ್ ಹಣದಲ್ಲಿ ಖರೀದಿಸಿದ ವಾಹನಗಳಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ

ಸರಿಯಲ್ಲ. ಯಾವ ರೀತಿ ಸಂಬಂಧ ಇದೆ ಎಂದರೆ ನನ್ನ 4 ಪ್ಲಾಟ್ ಹಣವನ್ನು ಇವರು ನಮಗೆ ಇದುವರೆಗೂ ನೀಡಿಲ್ಲ ಆ ರೀತಿ ಸಂಬಂಧವಿದೆ . ಸದರಿ ವಾಹನಗಳಿಗೂ , ಪ್ರತಿವಾದಿಗಳಿಗೂ , ದಾವಾ ಸ್ವತ್ತಿಗೂ ಸಂಬಂಧವಿದೆ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ನಿಪಿ 76 ರಿಂದ 107 ರ ದಾಖಲೆಗಳನ್ನು ಹಾಜರುಪಡಿಸಿದ್ದೇನೆ . ನಿಪಿ 76 ರಿಂದ 107 ದಾಖಲೆಗಳು ಯಾವುದು ಪ್ರತಿವಾದಿಗಳಿಗೆ ಮತ್ತು ದಾವಾ ಸ್ವತ್ತಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಬೆಳಿಗ್ಗಿನ ಅವಧಿ ಮುಗಿದಿದ್ದರಿಂದ ಪ್ರತಿವಾದಿ ಪರ ವಕೀಲರು ಮುಂದು ವರೆದ ಪಾಟೀಸವಾಲಿಗೆ ಕಾಲವಕಾಶವನ್ನು ಕೋರಿದ್ದು, ಅನುಮತಿಸಿ ಮುಂದುವರೆದ ಪಾಟೀಸವಾಲಿಗೆ ಅವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.